## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 100/2024

**ದಿನಾಂಕಃ 23.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ಮರುದಿನ ನಂಜುಂಡಪ್ಪರವರು ಮೃತಪಟ್ಟಿರುತ್ತಾರೆ. ಮರುದಿನ ಮಹಜರ್ ಗೆ ನಡುವನಹಳ್ಳಿಯ ಸುಧಾಕರ್ ರವರ ಮನೆಯ ಬಳಿ ಪೊಲೀಸರು ಬಂದಿದ್ದರು ಮತ್ತು ಮಹಜರ್ ತಯಾರಿಸಿದ್ದರು. ಆ ಸಮಯ ನಾನು, ನಂದಿನಿ ಹಾಗೂ ಇನ್ನೊಬ್ಬ ಹೆಂಗಸು ಇದ್ದರು, ಅವರು ಹೆಸರು ಈಗ ನನಗೆ ನೆನಪಾಗುತ್ತಿಲ್ಲ. ಅಲ್ಲಿ ನನ್ನೊಂದಿಗೆ ಅವರು ಸಹ ಸಹಿ ಹಾಕಿರುತ್ತಾರೆ. ಸದರಿ ಸಮಯ ಮಣ್ಣು, ರಕ್ತದ ಮಣ್ಣನ್ನು ತೆಗೆದುಕೊಂಡರು. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು, ಮಹಜರ್ ನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ಮಹಜರ್ ಗೆ ನಾನು, ನಂದಿನಿ ರವರು ಸಹಿ ಮಾಡಿದ್ದಾರೆ, ನಮ್ಮೊಂದಿಗೆ ಇನ್ನು ಬೇರೆಯವರು ಸಹಿ ಮಾಡಿದ್ದಾರೆ, ಅವರ ಹೆಸರು ಗೊತ್ತಿಲ್ಲ. ನಿಪಿ 3 ದೃಢಿಕೃತ ಪ್ರತಿಯಾಗಿರುವ ಕಾರಣ ಸಹಿಯನ್ನು ನಿಶಾನೆಕರಿಸಿರುವುದಿಲ್ಲ. ಸಾಕ್ಷಿ ಮು. ಮಾ 1 ಮತ್ತು 2 ನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಅವುಗಳಿಗೆ ಅಂಟಿಸಿರುವ ಚೀಟಿಗಳಲ್ಲಿ ನನ್ನ

ಸಹಿ ಇರುತ್ತದೆ, ಸದರಿ ಸಹಿಗಳನ್ನು ಮಹಜರ್ ಸಮಯ ಪಡೆದಿರುತ್ತಾರೆ. ಅದೇ ರೀತಿ ಮು.ಮಾ 3 ಮತ್ತು 4 ನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ವಿಶೇಷ ಸಾರ್ವಜನಿಕ ಅಭಿಯೋಜಕರಿಂದ:-**

2. ನಂತರ ಬೆಳಿಗ್ಗೆ 11.15 ಗಂಟೆ ಸುಮಾರಿಗೆ ನಾನು ನಮ್ಮ ಜಮೀನಿನಲ್ಲಿ ನಂಜುಂಡಪ್ಪನ ಹೆಂಡತಿ ನಂಜಮ್ಮನಿಗೆ ಜೋಳದ ಬಿತ್ತನೆ ಮಾಡಲು ಹೇಳಿ ಮನೆಯ ಬಳಿಗೆ ಬಂದಾಗ ರಾಮಕೃಷ್ಣಪ್ಪನ ಮನೆಯ ಬಳಿ ಗಲಾಟೆ ನಡೆಯುತ್ತಿತ್ತು ಎಂದರೆ ಸಾಕ್ಷಿಯು ಗಲಾಟೆ ಮುಗಿದುಹೋಗಿತ್ತು ಎಂದು ನುಡಿಯುತ್ತಾರೆ. ಅಲ್ಲಿಗೆ ಬಂದು ನೋಡಲಾಗಿ ರಾಮಾಂಜಿನಪ್ಪ, ರಾಧಮ್ಮ, ಮಂಜುನಾಥ, ನವೀನ್ ಕುಮಾರ್, ವಿಜಯ್ ಕುಮಾರ್, ಚೇತನ್, ಮಾರುತೇಶ್ ರವರೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಕೈಗಳಲ್ಲಿ ದೊಣ್ಣೆ ಹಿಡಿದುಕೊಂಡು ಮನೆಯ ಬಳಿ ಬಂದಿದ್ದರು ಎಂದರೆ ಸರಿಯಲ್ಲ. ಮನೆಯ ಬಳಿ ಇದ್ದ ರಾಮಕೃಷ್ಣಪ್ಪ ಮತ್ತು ಅವರ

ಹೆಂಡತಿ ಸರೋಜಮ್ಮರವರ ಮೇಲೆ ನಿಮ್ಮ ಮಗ ಏಕೆ ನಂಜುಂಡಪ್ಪನಿಗೆ ಸಪೋರ್ಟ್ ಮಾಡುವುದು, ಆತನಿಗೆ ಬುದ್ದಿ ಹೇಳಿ ಎಂದು ಜಗಳ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ರಾಮಕೃಷ್ಣಪ್ಪ ರವರ ಸೊಸೆ ಹೊಲದ ಕಡೆ ಹೋಗಿದ್ದ ಸುಧಾಕರ್ ರವರಿಗೆ ಪೋನ್ ಮಾಡಿ ಗಲಾಟೆಯಾಗುತ್ತಿದೆ ಬೇಗನೆ ಬರುವಂತೆ ಹೇಳಿದಾಗ ಸ್ವಲ್ಪ ಹೊತ್ತಿಗೆ ಸುಧಾಕರ್ ಮತ್ತು ನಂಜುಂಡಪ್ಪ ಸ್ಥಳಕ್ಕೆ ಬಂದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆಗ ಈ ನನ್ನ ಮಕ್ಕಳನ್ನು ಪ್ರಾಣ ಸಹಿತ ಬಿಡಬಾರದು, ಮುಗಿಸಿಬಿಡಬೇಕು ಎಂದು ಸುಧಾಕರ್ ಮತ್ತು ನಂಜುಂಡಪ್ಪರವರನ್ನು ಕೊಲೆ ಮಾಡುವ ಉದ್ದೇಶದಿಂದ ರಾಮಾಂಜಿನಪ್ಪ ಸುಧಾಕರ್ ಗೆ ಕೈಗಳಿಂದ ಹೊಡೆದು, ಕಾಲುಗಳಿಂದ ಒದ್ದನು, ವಿಜಯ್ ಕುಮಾರ್ ರವರು ದೊಣ್ಣೆಯಿಂದ ಸುಧಾಕರ್ ರವರ ತಲೆಗೆ ಹೊಡೆದು ರಕ್ತ ಗಾಯಪಡಿಸಿದನು ಎಂದರೆ ಸರಿಯಲ್ಲ. ನಂತರ ನವೀನ್ ಕುಮಾರ್ ದೊಣ್ಣೆಯಿಂದ ನಂಜುಂಡಪ್ಪನ ತಲಗೆ ಹೊಡೆದನು ಎಂದರೆ ಸರಿಯಲ್ಲ. ತಡೆಯಲು ಹೋದ ರಾಮಕೃಷ್ಣಪ್ಪನಿಗೆ ಮಂಜುನಾಥ ದೊಣ್ಣೆಯಿಂದ ಕುಂಡಿಯ ಮೇಲೆ ಹೊಡೆದು ಮೂಗೇಟು ಉಂಟು ಮಾಡಿದನು ಎಂದರೆ ಸರಿಯಲ್ಲ. ನಂತರ ಸರೋಜಮ್ಮನಿಗೆ ಚೇತನ್ ದೊಣ್ಣೆಯಿಂದ ಸೊಂಟಕ್ಕೆ ಹೊಡೆದು ಮೂಗೇಟು

ಉಂಟು ಮಾಡಿದನು ಎಂದರೆ ಸರಿಯಲ್ಲ. ನಂತರ ಅರ್ಚನಳಿಗೆ ರಾಧಮ್ಮ, ಮಾರುತೇಶ ಕೈಗಳಿಂದ ಮೈಮೇಲೆ ಹೊಡೆದರು, ಅಷ್ಟರಲ್ಲಿ ನಡುವನಹಳ್ಳಿ ಗ್ರಾಮದ ಸುರೇಶ್, ಮಂಜುನಾಥ, ಹನುಮಂತಪ್ಪರವರು ಸ್ಥಳಕ್ಕೆ ಬರುತ್ತಿದ್ದಂತೆ ಅವರನ್ನು ಹೊಡೆಯುತ್ತಿದ್ದವರು ಹೊರಟು ಹೋದರು ಎಂದು ಹೇಳಿದ್ದೇನೆ ಎಂದರೆ ಸಾಕ್ಷಿಯು ನಾನು ಹೇಳಿರುವುದಿಲ್ಲ, ನಂದಿನಿ ಮತ್ತು ಇನ್ನೊಬ್ಬಾಕೆ ಹೇಳಿದ್ದಾರೆ, ನಾನು ಹೇಳಿರುವುದಿಲ್ಲ, ನಾನು ಹೇಳುವ ಪರಿಸ್ಥಿತಿಯಲ್ಲಿರಲಿಲ್ಲ. ಆದರೆ ಪೊಲೀಸರು ನನಗೆ ಕೇಳುತ್ತಲೆ ಇದ್ದರು, ನನಗೆ ತಲೆ ಸುತ್ತು ಬಂದು ಜ್ಞಾನ ಇಲ್ಲದಂತಾಗಿತ್ತು ಎಂದು ನುಡಿಯುತ್ತಾರೆ. ಹೋಗುವಾಗ ಮಂಜುನಾಥ ಮತ್ತು ಚೇತನ್ ರವರುಗಳು ಮು. ಮಾ 1 ಮತ್ತು 2 ನ್ನು ಬಿಸಾಡಿ ಹೋದರು ಎಂದರೆ ಸಾಕ್ಷಿಯು ನಾನು ನೋಡುವ ಪರಿಸ್ಥಿತಿಯಲ್ಲಿರಲಿಲ್ಲ, ಬಿಸಾಡಿರುವುದನ್ನು ನಾನು ನೋಡಿಲ್ಲ ಎಂದು ಹೇಳುತ್ತಾರೆ. ಆಗ ನಂಜುಂಡಪ್ಪರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸಾಕ್ಷಿಯು ನಾನೇ ಆಟೋವನ್ನು ಕರೆಯಿಸಿ ನಂಜುಂಡಪ್ಪರವರನ್ನು ಆಸ್ಪತ್ರೆಗೆ ಕಳುಹಿಸಿದೆ ಎಂದು ನುಡಿಯುತ್ತಾರೆ.

ದಿಃ 18.08.2024 ರಂದು ಸಂಜೆ 5.30 ಕ್ಕೆ ಬಂದ ಸಮಯ ಪೊಲೀಸರು ಮಹಜರ್ ಸಮಯ ನಾನು ಮತ್ತು ನಂದಿನಿ ಮು.ಮಾ 1 ಮತ್ತು 2 ನ್ನು ಹಾಜರುಪಡಿಸಿರುತ್ತೇವೆ ಎಂದರೆ ಸಾಕ್ಷಿಯು ನಂದಿನಿಯವರು ಹಾಜರುಪಡಿಸಿದ್ದರು ಅದನ್ನು ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆ ಬಗ್ಗೆ ನಾನು ದಿಃ 19.10.2024 ರಂದು "ನಂತರ ಬೆಳಿಗ್ಗೆ ----------------------- ಬಿಸಾಡಿ ಹೋದರು" ಎಂದು ತನಿಖಾಧಿಕಾರಿಗೆ ನಿಪಿ 4 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನೀವು ಆರೋಪಿತರ ಕುಟುಂಬದವರೊಂದಿಗೆ ಹಾಗೂ ದೂರುದಾರರ ಕುಟುಂಬದವರೊಂದಿಗೆ ಚನ್ನಾಗಿದ್ದೀರಿ ಎಂದರೆ ಸಾಕ್ಷಿಯು ಎಲ್ಲರೊಂದಿಗೆ ಚೆನ್ನಾಗಿದ್ದೇನೆಂದು ನುಡಿಯುತ್ತಾರೆ. ಈ ದಿನ ಆರೋಪಿತರು ನಮ್ಮ ವಿರುದ್ದ ಏನು ಸಾಕ್ಷಿ ನುಡಿಯಬಾರದು ಎಂದು ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಹೆಚ್.ಆರ್.ವಿ. ವಕೀಲರಿಂದ:**

3. ನಾನು ಮದುವೆಯಾದಗಿನಿಂದ ಮಧುಗಿರಿ ತಾಲ್ಲೂಕು, ಸಿಂಗರಗೊಂಡನ ಹಳ್ಳಿಯಲ್ಲಿ ವಾಸವಿರುತ್ತೇನೆ. ನಾನು ನಡುವಿನಹಳ್ಳಿಯಲ್ಲಿ ವಾಸವಿರುವುದಿಲ್ಲ, ಆದರೆ ಜಮೀನು ಖರೀದಿ ಮಾಡಿರುತ್ತೇನೆ. ನನ್ನ ಗಂಡ ಜೀವಂತವಾಗಿದ್ದಾರೆ, ಅವರೆ ಸ್ಟ್ರೋಕ್ ಆಗಿರುತ್ತದೆ. ನಾನು, ನನ್ನ ಗಂಡ ಇಬ್ಬರು ನಡುವನಹಳ್ಳಿಗೆ ಜಮೀನು ನೋಡಿಕೊಂಡು ಹೋಗಲು ಬರುತ್ತಿದ್ದೇವು. ಸಾಕ್ಷಿಗೆ ನೀವು ಕಂಬಾಲಹಳ್ಳಿ ಜಮೀನ ವಿಚಾರವಾಗಿ ಕೇಸು ಇದೆ ಎಂದು ಹೇಳಿದ್ದು , ಕೇಸನ್ನು ಯಾರು, ಯಾವಾಗ ಹಾಕಿದ್ದಾರೆ ಎಂದು ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿಯು ನಮ್ಮ ಅಪ್ಪನ ಕಾಲದಲ್ಲಿ ಕೇಸು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕೇಸಿನ ವಿಚಾರವಾಗಿ ನಿಮ್ಮ ಅಣ್ಣ ತಮ್ಮಂದಿರ ಮಧ್ಯೆ ಏನಾದರೂ ಮಾತುಕತೆಯಾದ ಬಗ್ಗೆ ಗೊತ್ತೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಒಂದು ದಿವಸ ಯಾರೊ ಅವರಿಗೆ ಕೇಸನ್ನು ನಾವೇ ನೋಡಿಕೊಳ್ಳುತ್ತೇವೆ, ಜಮೀನು ಕೊಡುತ್ತೀರಾ ಎಂದು ನನಗೆ ಯಾರು, ಯಾವತ್ತು ಹೇಳಿದ್ದರು ಎಂದರೆ ಸಾಕ್ಷಿಯು ಗಲಾಟೆಯಾದ ದಿವಸ ಬೆಳಿಗ್ಗೆ

ನಂಜುಂಡಪ್ಪ ನನಗೆ ಹೇಳಿದ್ದರು. ಸಾಕ್ಷಿಯು ಮುಂದುವರೆದು ನಂಜುಂಡಪ್ಪ ಜಮೀನನ್ನು ತೆಗೆದುಕೊಳ್ಳಲು ಬರುತ್ತಿದ್ದಾರೆ, ನಿನ್ನ ತಮ್ಮಂದಿರಿಗೆ ಹೇಳಮ್ಮ ಎಂದು ಹೇಳಿದ್ದರು. ಐನೋರು ಮನೆಯ ಹತ್ತಿರ ಕೂತು ಮಾತನಾಡೋಣ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನಂಜುಂಡಪ್ಪ, ರಾಧಮ್ಮ, ರಾಮಾಂಜಿನಪ್ಪರವರಿಗೆ ಯಾವತ್ತು ಗಲಾಟೆಯಗಿಲ್ಲ, ವಿಶ್ವಾಸದಿಂದ ಇದ್ದರು ಎಂದರೆ ಸಾಕ್ಷಿಯು ಹೌದು ಎಂದು ಹೇಳಿ, ಆ ದಿನ ಏನಕ್ಕೆ ಗಲಾಟೆ ಮಾಡಿಕೊಂಡರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಧಮ್ಮ, ರಾಮಾಂಜಿನಪ್ಪ, ಸುಧಾಕರ್ ಮತ್ತು ರಾಮಕೃಷ್ಣಪ್ಪರವರು ವಿಶ್ವಾಸದಿಂದ ಇರಲಿಲ್ಲ ಎಂದರೆ ಸಾಕ್ಷಿಯು ಮನೆಯ ಸೈಟಿನ ವಿಚಾರಕ್ಕೆ ಯಾವಾಗಲು ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಗಲಾಟೆಯ ಹಿಂದಿನ ದಿನ ಬಂದಿರುತ್ತೇನೆ, ತೋಟದಲ್ಲಿ ಉಳಿದುಕೊಂಡಿದ್ದೇನು. ನಂಜುಂಡಪ್ಪ ಐನೋರ ಮನೆಯ ಬಳಿ ಮಾತನಾಡಲು ನನ್ನನ್ನು ಕರೆದಿರಲಿಲ್ಲ. ಕಂಬಾಲಹಳ್ಳಿ ಜಮೀನು ಮಾರುವ ವಿಚಾರ ರಾಧಮ್ಮ, ರಾಮಾಂಜಿನಪ್ಪರವರಿಗೆ ಇಷ್ಟ ಇರಲಿಲ್ಲ ಎಂದರೆ ಸಾಕ್ಷಿಯು ನಾನೇನು ನೋಡಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಮಗೆ

ನಡುವನಹಳ್ಳಿಯಲ್ಲಿ ಎಲ್ಲರು ಪರಿಚಯ ಇದ್ದಾರ ಎಂದರೆ ಸಾಕ್ಷಿ ನಾವು ತೋಟಕ್ಕೆ ಬರುತ್ತೇವೆ ಮತ್ತು ಹೋಗುತ್ತೇವೆ ಎಂದು ನುಡಿಯುತ್ತಾರೆ. ನನ್ನ ಹಿಂದಿನ ಮುಖ್ಯ ವಿಚಾರಣೆಯಲ್ಲಿ ಊರಿನಲ್ಲಿದ್ದ ಒಬ್ಬ ಹುಡುಗ ಬಂದು ಊರಿನಲ್ಲಿ ಗಲಾಟೆ ಮಾಡಿಕೊಂಡಿದ್ದಾರೆ, ನಿಮಗೆ ಗೊತ್ತಾಗಲಿಲ್ಲವೆ ಎಂದು ಹೇಳಿದ್ದು, ಆ ಹುಡುಗ ಯಾರು ಎಂದು ನೀವು ಪೊಲೀಸರಿಗೆ ಹೇಳಿದ್ದೀರಾ ಎಂದರೇ ಸಾಕ್ಷಿಯು ಆ ವ್ಯಕ್ತಿಯ ಹೆಸರು ಹನುಮಂತ ಎಂದು ಹೇಳಿ ಅವರ ಹೆಸರನ್ನು ಪೊಲೀಸರಿಗೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಆ ಹುಡುಗನ ವಯಸ್ಸು ಎಷ್ಟು ಎಂದು ಕೇಳಿದ್ದಕ್ಕೆ ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಗಲಾಟೆ ನಡೆದಿದೆ ಎಂದು ಹೇಳಲಾದ ಸ್ಥಳ ನಮ್ಮ ಜಮೀನಿನಿಂದ ಅರ್ಧ ಮೈಲಿ ದೂರದಲ್ಲಿದೆ. ನನ್ನ ಹಿಂದಿನ ಮುಖ್ಯ ವಿಚಾರಣೆಯಲ್ಲಿ ರಾಮಾಂಜಿನಪ್ಪರವರ ಮನೆಯ ಬಳಿ ಹೋಗಿ ನೋಡಲಾಗಿ, ರಾಮಾಂಜಿನಪ್ಪರವರು ಸಹ ಬಿದ್ದು ಹೋಗಿದ್ದರು, ಅವರನ್ನೂ ಸಹ ಆಟೋ ಹತ್ತಿಸಿ ಆಸ್ಪತ್ರೆಗೆ ಕಳುಹಿಸಿದೆ ಎಂದು ಹೇಳಿದ್ದು, ರಾಮಾಂಜಿನಪ್ಪರವರಿಗೆ ಎಲ್ಲೆಲ್ಲಿ ಗಾಯಗಳಾಗಿದ್ದವು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಂಜುಂಡಪ್ಪರವರಿಗೆ ಎಲ್ಲೆಲ್ಲೆ ಗಾಯಗಳಾಗಿದ್ದವು ಎಂದರೆ ಸಾಕ್ಷಿಯು ತಲೆಗೆ ಗಾಯಗಳಾಗಿ, ಆತ

ಬಿದಿದ್ದ ಸ್ಥಳದಲ್ಲಿ ರಕ್ತ ಆಗಿತ್ತು ಎಂದು ನುಡಿಯುತ್ತಾರೆ. ನಿಪಿ 3 ನ್ನು ಎಲ್ಲಿ, ಯಾರು, ಯಾವಾಗ ಟೈಪ್ ಮಾಡಿದರು ಗೊತ್ತೆ ಎಂದರೆ ಸಾಕ್ಷಿಯು ಸುಧಾಕರ್ ರವರ ಮನೆಯ ಬಳಿ ಟೈಪ್ ಮಾಡಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಗೆ ಎಷಟು ಗಂಟೆಗೆ ಟೈಪ್ ಮಾಡಿದರು ಗೊತ್ತಾ ಎಂದರೆ ಸಾಕ್ಷಿಯು ನನಗೆ ಟೈಂ ಗೊತ್ತಾಗುವುದಿಲ್ಲ ಎಂದು ಹೇಳಿ, ಮುಂದುವರೆದು 12.30-1.00 ಗಂಟೆ ಹೇಳಿ ನಾವು ಓದಲಿಲ್ಲ ಆಗಾಗಿ ಸಮಯ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಂದಿನಿರವರು ದೊಣ್ಣೆಗಳನ್ನು ಎಲ್ಲಿಂದ ಹಾಜರುಪಡಿಸಿದ್ದರು ಎಂದರೆ ಸಾಕ್ಷಿಯು ಅಲ್ಲೆ ಬಿದಿದ್ದ ದೊಣ್ಣೆಗಳನ್ನು ಹಾಜರುಪಡಿಸಿದರು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಂದಿನಿರವರು ದೊಣ್ಣೆಗಳನ್ನು ತಂದು ಹಾಜರುಪಡಿಸಿದ್ದು ಎಂದು ಹೇಳಿದ್ದು, ಸದರಿ ದೊಣ್ಣೆಗಳನ್ನು ನಂದಿನಿರವರು ಎಲ್ಲಿ ಇಟ್ಟುಕೊಂಡಿದ್ದರು ಎಂದು ಗೊತ್ತಾ ಎಂದರೆ ಸಾಕ್ಷಿಯು ಸುಧಾಕರ್ ರವರ ಮನೆಯ ಬಳಿ ಮಹಜರ್ ತಯಾರಿಸಿದ ಸ್ಥಳದಲ್ಲೆ ಬಿದ್ದಿದ್ದವು ಎಂದು ನುಡಿಯುತ್ತಾರೆ. ಸದರಿ ದೊಣ್ಣೆಗಳನ್ನು ನಂಜುಂಡಪ್ಪ ಮಣ್ಣಾದ ದಿವಸ ತೆಗೆದುಕೊಂಡಿರುತ್ತಾರೆ. ಬಿಳಿ ಬಟ್ಟೆಗೆ ಚೀಟಿಗಳನ್ನು ಯಾವಾಗ, ಎಲ್ಲಿ ಅಂಟಿಸಿದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ನೀವು ನಂಜುಂಡಪ್ಪ ಮತ್ತು ರಾಮಾಂಜಿನಪ್ಪರವರನ್ನು ಆಟೋದಲ್ಲಿ ಕಳುಹಿಸಿದ ನಂತರ ಎಲ್ಲಿ ಉಳಿದುಕೊಂಡರಿ ಎಂದರೆ ಸಾಕ್ಷಿಯು ನಾವು ಮಣ್ಣು ಮಾಡಿದ ನಂತರ ನಮ್ಮ ಊರಿಗೆ ಹೊರಟು ಹೋದೆವು ಎಂದು ನುಡಿಯುತ್ತಾರೆ. ಸುಧಾಕರ್ ರವರ ಕುಟುಂಬದವರೊಂದಿಗೆ ವಿಶ್ವಾಸದಿಂದ ಇರುವುದರಿಂದ ಅವರು ಹೇಳಿಕೊಟ್ಟ ಹಾಗೆ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

**(ದಿನಾಂಕ: 23.03.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**